

ರಘುನಂದನ

# ಅರಣ್ಯಾನಿ

# ದಿನಾಲೂ ನೆನೆವ ನಾನು ಧನ್ಯ

ಎಷ್ಟೋ ವರ್ಷದಿಂದ ಅನ್ನಿಸುತ್ತಿದ್ದು ನನ್ನೊಳಗೆ ಕಾಯಂ ನಿಂತುಬಿಟ್ಟಿರುವ ಮಾತು: ಕೆಲವೊಮ್ಮೆ, ನುಡಿಯೊಂದರ ಕಾವ್ಯದಲ್ಲಿ, ಕವಿಯೊಬ್ಬನ ಕಾವ್ಯಕರ್ಮದಲ್ಲಿ ಪವಾಡ ಅನ್ನಿಸುವಂಥದು ನಡೆದುಹೋಗುತ್ತದೆ. ಅಥವಾ, ಕಡೇಪಕ್ಷ, ಆ ನುಡಿಯ, ಕಾವ್ಯದ ಗುಡಿಯ ಮೂಲೆಯೊಂದರಲ್ಲಿ ಬೊಂತೆ ಹಾಸಿಕೊಂಡಿದ್ದು, ಸದಾ ಅಲ್ಲೇ ಸುತ್ತಾಡುತ್ತಿರುವೊಬ್ಬನಿಗೆ ಅಂಥದೊಂದು ಆಗಿದೆ ಅನ್ನಿಸುವಂಥ ಕಾವ್ಯದರ್ಶನ ಆಗುತ್ತದೆ.

ಕವಿ ಸು.ರಂ. ಎಕ್ಕುಂಡಿ ಅವರ ಈ 'ಅರಣ್ಯಾನಿ' ಕವಿತೆ ನನ್ನಮಟ್ಟಿಗೆ ಅಂಥದೊಂದು ಪವಾಡ, ಕಾವ್ಯದರ್ಶನ. ಈ ಕವಿತೆ ಎಂಬ ದಿವ್ಯವನ್ನು ಕುರಿತ ನನ್ನ ಬೆರಗು, ಮತ್ತು ಮಾತು ಮೂಕವಾಗುವಷ್ಟು ಭಕ್ತಿಯ ಭಾವವನ್ನು ಆ ಗುಡಿಗೆ ನಡೆದುಕೊಳ್ಳುವ ಕೆಲವು ಹಿರಿಕಿರಿಯರಲ್ಲಿ ಈಹಿಂದೆ ಹೇಳಿಕೊಂಡಿದ್ದೆ. ಅದರ ಪಠ್ಯವನ್ನು ಅವರಿಗೆ ಕಳಿಸಿಕೊಟ್ಟಿದ್ದೆ. ಒಂದು ಮಾತಿಲ್ಲ, ಯಾರಿಂದಲೂ. ಮೋಘಂ, ಎಲ್ಲರೂ. ಯಾಕೆಂದು ಗೊತ್ತಾಗಲಿಲ್ಲ; ತುಸು ಬೇಸರವಾಯಿತು. ಆದರೆ ನನ್ನ ಬೆರಗು, ಭಕ್ತಿಯ ಭಾವ – ಅದು ಕಾಯಂ.

ಎಕ್ಕುಂಡಿ ಅವರ 'ಕಥನ ಕವನ' ಸಂಕಲನದ ಕಟ್ಟಕಡೆಯಲ್ಲಿರುವ ಕವಿತೆ ಇದು. ಈ ಚಿಕ್ಕ ಬರಹ ಇದರ ದಿವ್ಯತೆಯನ್ನು ಒಂದಷ್ಟು ಬಿಡಿಸಿ ನೋಡಿಕೊಳ್ಳುವ ಪ್ರಯತ್ನವಾಗಿದೆ. ಕವಿತೆಯ ಪಠ್ಯವೂ ಇಲ್ಲೇ ಇದೆ. ಈ ಕವಿತೆಯಿಂದ ನನಗಾದದ್ದು, ಆಗುತ್ತಲೇ ಇರುವುದು ನಿಮ್ಮಲ್ಲೂ ಯಾರಿಗಾದರೂ – ಕಡೇಪಕ್ಷ ಒಬ್ಬರಿಗಾದರೂ – ಆದರೆ, ನನಗನ್ನಿಸುವುದೇ ಅನ್ನಿಸಿದರೆ, ಅಥವಾ ನೀವು ಇದನ್ನು ಈಗಾಗಲೇ ಬಲ್ಲಿರಾಗಿದ್ದು ನಿಮಗೆ ಹಾಗೇ ಆಗಿದೆ, ಅನ್ನಿಸಿದೆ ಎಂದಾದರೆ, ನಾನು ಧನ್ಯ. ನೀವೂ ಧನ್ಯರು.

ಬೇರೆ ಯಾವ ಮಾಹಿತಿಯೂ ಇಲ್ಲದೆ, ಕವಿತೆಯನ್ನು ಒಮ್ಮೆ ಓದಿಕೊಳ್ಳಿ, ಸುಮ್ಮನೆ: ದೊಡ್ಡ ಕಾಡಿನ ನಡುವೆ ಒಬ್ಬರೇ ಇದ್ದೀರಿ ಅಂದುಕೊಂಡು. ಕವಿತೆಯ ಹೆಸರಿನಿಂದ ಶುರುಮಾಡಿ, ಮೊದಲ ಮೂರು ನುಡಿ ಓದಿಕೊಳ್ಳಿ... ಹೀಗೆ: ತುಟಿ ತೆರೆದು, ಮೆತ್ತಗೆ... ಆದರೂ... ತುಂಬಿದ, ಆಳವಾದ ಕೊರಳಲ್ಲಿ ಮೆತ್ತಗೆ ಮಣಮಣಿಸಿ:

**ಅರಣ್ಯಾನಿ...**

**ಮೌನವನು ಮೈತುಂಬ ಹೊದ್ದಿರುವ ಕಾಡು,...**

ಮುಂತಾಗಿ.

ಮೂರು ನುಡಿಯಷ್ಟೆ ಓದಿ ನಿಲ್ಲಲಾರಿರಿ. ಕವಿತೆ ನಿಮ್ಮನ್ನು ಕವಿದು, ಸೆಳಕೊಂಡು ಹೋಗುತ್ತಿದೆ.

ಈಗ ತನ್ನಿಂತಾನೇ ಗೊತ್ತಾಗಿದೆ: 'ಅರಣ್ಯಾನಿ' ಒಬ್ಬ ಹೆಣ್ಣು. ಆದರೆ ಮನುಷ್ಯಳಲ್ಲ... ಬೇರೆನೋ... ಕಣ್ಣಿಗೆ ನಿಚ್ಚಳ ಅಲ್ಲ ಅವಳು... ಆದರೆ ಆಹಾ... ಏನೋ ಫೀಲಿಂಗ್... ತುಂಬಿಕೊಳ್ಳುತ್ತಿದೆ... ಆ ತುಂಬು ಫೀಲಿಂಗ್ ಅವಳ ಇರವು...

ಆದರೆ ಉಳಿದೆಲ್ಲವೂ ಕಣ್ಣಿಗೆ ಕಟ್ಟುತ್ತಿದೆ... ಕಿವಿಹೊಗುತ್ತಿದೆ... ಮರ, ಗಿಡ, ಪೊದೆ, ಬಳ್ಳಿ, ಬಳ್ಳಿ ... ಎಲ್ಲ ಎಷ್ಟು ನಿಚ್ಚಳ... ಎಲೋss ಉದುರಿ, ಟೊಂಗೆ, ಧಡಕ್ಕ... ಎಲೆ, ಸರ್ಸರಕ್... ಅದೆಲ್ಲವೂ ಅವಳೇ, ಅವಳೇನೆ... ಫೀಲಿಂಗ್...

ಆದರೆ, ಹುಲ್ಲು, ಆಳೆತ್ತರ... ದಾರಿ ಕಾಣದು ನಿಮಗೆ... ಹೆದರಿಕೆ ಆಗುತ್ತಿದೆ... ಮೈಯೆಲ್ಲ ಕಣ್ಣಾಗಿ, ಕಿವಿಯಾಗಿ ಈಗ, ಕೂದಲೆದ್ದು ನಿಂತಿದೆ... ಬಾಯಿ ಒಣಗಿದೆ... ಹೆದರಿಕೆ...

ಅರೆ... ಅಯ್ಯೊ, ನಿನಗೂ... ನಿನಗೇ... ದಿಕ್ಕುತಪ್ಪಿತೇ, ಅರಣ್ಯಾನಿ... ಕಾಡಿಗೇನೆ... ಕಾಡಿನಲ್ಲಿ...

ಪೊದೆಯಲ್ಲಿ ಮಿಡತೆ... ಏನೋ ಸಡಗರ...